Sri H. R. ABDUL GAFFAR (Deputy Minister for Finance).—I beg to lay on the Table the Finance Accounts of the State of Mysore for the year 1963-64 in pursuance of Clause (2) of Article 151 of the Constitution of India.

BUDGET ESTIMATES FOR 1965-66

General Discussion—*Continued.*

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ ನಾರ್ತ್).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ವ್ಯವಸಾಯ ಇಲಾಖೆ ಹಾಗೂ ವಿದ್ಯಾಭ್ಯಾಸ ವಿಚಾರವಾಗಿ ನಾನು ಮಾತನಾಡಿದೆನು. ಈ ದಿವಸ ಫಾರೆಸ್ಟ್ ಇಲಾಖೆ ಬಗ್ಗೆ ಕೆಲವು ಅಂಶಗಳನ್ನು ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ. ಸ್ವಾಮಿ, 1956ನೇ ಇಸವಿಯಲ್ಲಿ 1,40,957 ಎಕರೆ ಸಾಗುವಳಿ ಜಮೀನು ಇದ್ದಿತು. ಈಗ ಅದು 4,57,703 ಎಕರೆಯಷ್ಟು ಸಾಗುವಳಿಯಾಗಿದೆ ಎಂದು ಹಣಕಾಸಿನ ನಚಿವರ ಭಾಷಣದಲ್ಲಿ ಹೇಳಿದೆ. ಮೂರನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ 1,06,000 ಎಕರೆ ಪ್ಲಾಂಟೇಶನ್ ಆಗಿದೆ ಎಂದು ತಮ್ಮ ರಿಪೋರ್ಟಿನಲ್ಲಿ ಹೇಳುತ್ತೀರಿ. ಆದರೆ ವರಮಾನ 1957ನೇ ಇಸವಿಯಲ್ಲಿ 334 ಲಕ್ಷ ರೂ. ಇದ್ದುದು ಈಗ 370 ಲಕ್ಷ ರೂಪಾಯಿಗೆ ಏರಿದೆ. ಈ ಅಂಕಿ ಅಂಶಗಳನ್ನೂ ಅವರು ಕೊಟ್ಟಿರತಕ್ಕ ವರಮಾನವನ್ನೂ ನೋಡಿದರೆ ಅವುಗಳಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಸರಕಾರ ಫಾರೆಸ್ಟ್ ಇಲಾಖೆಯಲ್ಲಿ ಕಳ್ಳತನದ ಸಾಗಾಣಿಕೆಗೆ ಅವಕಾಶಕೊಟ್ಟಿದೆ ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಉದಾಹರಣೆ ಹೇಳುವುದಾದರೆ ಪ್ರತಿಯೊಂದು ಕೂಪನ್ನು ಮೂರು ನಾಲ್ಕುಸಾರಿ ಉಪಯೋಗಿಸಿದಂಥ ಸಂದರ್ಭ ಕಂಡುಬಂದಿದೆ. ಇದಲ್ಲದೆ ಮರ, ಸೌದೆ ಸಾಗಿಸುತ್ತಾರೆ ಎನ್ನುವುದು ನಮ್ಮ ಕಿವಿಗೆ ಮುಟ್ಟಿದೆ. ಸರಕಾರ ಎಚ್ಚರಿಕೆಯಿಂದ ಕೆಲಸ ಮಾಡುತ್ತಾ ಇಲ್ಲ ಎನ್ನುವುದಕ್ಕೆ ಗಮನ ಹರಿಸಲು ಪ್ರಯತ್ನ ಮಾಡುತ್ತೇನೆ.

ಹಾಗೆಯೇ ಕೋ-ಆಪರೇಟಿವ್ ರೈಸ್‌ಮಿಲ್ಲು ಮಾಡುತ್ತೇವೆಂದು ಭಾಷಣದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ ನಿಜವಾಗಿಯೂ ಸರಕಾರ ಯಾವುದನ್ನು ಮಾಡಬೇಕೋ ಅದನ್ನು ಮಾಡುತ್ತಿಲ್ಲ. ಯಾವುದನ್ನು ಮಾಡಬಾರದೋ ಅದನ್ನು ಮಾಡುತ್ತಿದೆ. ವ್ಯಾಪಾರಿ ಮನೋಭಾವಕ್ಕೆ ಇಳಿಯುವ ದೃಷ್ಟಿಯಿಂದ ಆಹಾರ ಅಭಾವ ಹೆಚ್ಚು ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡುವ ದಾರಿಯಲ್ಲಿ ಹೋಗುತ್ತಿದೆ.

Sri C. J. MUCKANNAPPA (Sira).—Sir, I am bringing to the notice of the Hon'ble Chair, that the representative of Akashvani is using his transistor radio in the opposition lounge and hearing the cricket match commentary. The Chair has prohibited so many things in the viscinity of the Assembly hall. May I ask how this is allowed, Sir? Even walking sticks are not allowed. I want a ruling about this.

Mr. SPEAKER.—In olden days walking sticks were not allowed in the House of Commons, because it was dangerous. Transistor radios did not exist then. I will ascertain the fact and give a ruling if necessary.

ಶ್ರೀ ಬಿ. ಕೆ. ಪುಟ್ಟಯ್ಯ.—ಸರಕಾರ ಎಕಾನಮಿ ಮೆಜರ್ಸ್ ತೆಗೆದುಕೊಳ್ಳುವ ಬಗ್ಗೆ ದೀರ್ಘವಾಗಿ ಆಳವಾಗಿ ವಿವರ ಕೊಟ್ಟಿದೆ. 100ಕ್ಕೆ 30ರಷ್ಟು ಭಾಗ ಕೆಲಸಗಾರರು ಪಾಸ್ತಿ ಇದ್ದಾರೆ, ಇಷ್ಟನ್ನು ಖೋತಾ ಮಾಡುವ ಸಾಧ್ಯವಿದೆ ಎಂದು ಹೇಳಿದ್ದಾರೆ. ಆಲ್ಲದೆ ಎನ್. ಜಿ. ಓ. ಗಳಿಗೆ ಹೆಚ್ಚಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ ಎಂದು ಸಹ ಹೇಳಿದ್ದಾರೆ. ನಾವು ಈ ಅಂಶವನ್ನು ಸರಕಾರದ ಗಮನಕ್ಕೆ ಕಳೆದ ಮೂರು ವರ್ಷಗಳಿಂದ ತಂದಿದ್ದೇವೆ. ಅನ್‌ನೆಸೆಸರೀ ಎಸ್ಟಾಬ್ಲಿಶ್‌ಮೆಂಟ್ ಇದೆ ಎಂದು ನಾವು ಪದೇ ಪದೇ ಹೇಳಿದ್ದೇವೆ. ಹಾಗೆ ನಾವು ಹೇಳಿದರೂ ಕೂಡ ಇಲ್ಲ ಎಂದು ಹೇಳಿದ್ದಾರೆ. ಈಗ ಅದನ್ನು ತಾವೇ ಭಾಷಣದಲ್ಲಿ ಹೇಳಿದ್ದನ್ನು ನೋಡಿದರೆ ನಾವು ಹೇಳುವುದಕ್ಕೆ ಬೆಲೆ ಇಲ್ಲ ತಾವು ಹೇಳುವುದು ನಿಜ ಎಂಬ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ. ಇದರಲ್ಲಿ ಒಂದು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿರುವುದು ಅಂದರೆ, ಇರತಕ್ಕವರಲ್ಲಿ ಯಾರನ್ನೂ ತೆಗೆದು ಹಾಕುವುದಿಲ್ಲ ಎಂದು